ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 7** **ಪ್ರಥಮ ಭಾಷೆ : ಕನ್ನಡ** **ಮಾಹೆ : ಫೆಬ್ರವರಿ – 2022**

**ಗದ್ಯ ಭಾಗ : ಸಂಕ್ರಾಂತಿಯಂದು ಸುಖ ದುಃಖ**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಫೆಬ್ರವರಿ 1 ನೇ ವಾರ ಮತ್ತು 2 ನೇ ವಾರ** | * ಸರಳ, ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಬರವಣಿಗೆಯಲ್ಲಿ ಬಳಸುವುದು. | * ವಿವಿಧ ಧಾರ್ಮಿಕ ಹಬ್ಬಗಳ ಪರಿಚಯ ಮಾಡಿಕೊಡುವುದು.<br>* ಅವುಗಳ ವಿಶೇಷತೆಯನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.<br>* ಯಾವುದಾದರೂ ಒಂದು ಹಬ್ಬದ ಆಚರಣೆ ಹಾಗೂ ಅದರ ವಿಶೇಷತೆಯ ಬಗ್ಗೆ ಬರೆಯಲು ವಿದ್ಯಾರ್ಥಿಗಳಿಗೆ ಹೇಳುವುದು.<br>* ವಿದ್ಯಾರ್ಥಿಗಳು ಬರೆದ ಲೇಖನದಲ್ಲಿ ಸಂದರ್ಭಕ್ಕೆ ತಕ್ಕಂತೆ ಲೇಖನ ಚಿಹ್ನೆಗಳನ್ನು ಬಳಸಿರುವರೇ? ಎಂಬುದನ್ನು ಖಚಿತ ಪಡಿಸಿಕೊಳ್ಳುವುದು. | ಅವಲೋಕನ<br>ಅವಲೋಕನ ಪಟ್ಟಿ |
| | | * ಲೇಖಕರ ಪರಿಚಯ | * ಲೇಖಕರಾದ ಎ ಆರ್ ಮಣಿಕಾಂತ್‌ರವರ ಜನ್ಮಸ್ಥಳ, ಕೃತಿಗಳು ಹಾಗೂ ಅವರು ಪಡೆದ ಪ್ರಶಸ್ತಿಗಳ ಬಗ್ಗೆ ತಿಳಿಸಿಕೊಡುವುದು. | ಪ್ರಸ್ತುತ ಗದ್ಯವನ್ನು ಯಾವ ಕೃತಿಯಿಂದ ಆರಿಸಲಾಗಿದೆ? |
| | | * ಸ್ಪಷ್ಟ ಓದು | * ಶಿಕ್ಷಕರ ಮಾದರಿ ವಾಚನ, ವಿದ್ಯಾರ್ಥಿಗಳಿಂದ ಮೌನ ಓದು ಹಾಗೂ ಅನುಕರಣಾ ಓದು. | |
| | | * ಹೊಸ ಪದಗಳ ಪರಿಚಯ | * ಪಠ್ಯದಲ್ಲಿ ಬಂದಿರುವ ಹೊಸ ಪದಗಳನ್ನು ಪರಿಚಯಿಸುವುದು<br>ಸಂಕ್ರಾಂತಿ – ದಾಟುವಿಕೆ, ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಹೋಗುವ ದಿನ | ಅಭ್ಯಾಸ ಹಾಳೆ |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಸಂಕ್ರಾಂತಿ ಹಬ್ಬದ ವೈಶಿಷ್ಟ್ಯ ಹಾಗೂ ಮಹತ್ವವನ್ನು ತಿಳಿಯುವರು. | * "ಎಳ್ಳು–ಬೆಲ್ಲ ತಿಂದು ಒಳ್ಳೆಯ ಮಾತನಾಡಿ" ಈ ಮಾತಿನ ವಿಶೇಷತೆಯ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಡುವುದು.<br>* ಸಂಕ್ರಾಂತಿ ಹಬ್ಬದಲ್ಲಿ ದನಕರುಗಳನ್ನು ಏಕೆ ಕಿಚ್ಚು ಹಾಯಿಸುತ್ತಾರೆ ಎಂಬುದರ ಕಾರಣವನ್ನು ವಿದ್ಯಾರ್ಥಿಗಳಿಗೆ ಅರ್ಥೈಸುವುದು.<br>* ಇ–ಸಂವೇದ ಪಾಠವನ್ನು ವೀಕ್ಷಿಸಲು ಶಿಕ್ಷಕರು ಅನುಕೂಲಿಸುವುದು. | ಅವಲೋಕನ<br><br>ಅವಲೋಕನ ಪಟ್ಟಿ |
| | | * ಲೇಖನಚಿಹ್ನೆಗಳನ್ನು ಗುರುತಿಸಿ, ವಾಕ್ಯಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಬರೆಯುವರು. | * ಲೇಖನ ಚಿಹ್ನೆಗಳನ್ನು ಒಳಗೊಂಡಿರುವ ಕೆಲವು ವಾಕ್ಯಗುಚ್ಛಗಳನ್ನು ನೀಡಿ, ಲೇಖನ ಚಿಹ್ನೆಗಳನ್ನು ಪರಿಚಯ ಮಾಡಿಕೊಡುವುದು.<br>1. ಪೂರ್ಣವಿರಾಮ (.)<br>2. ಅಲ್ಪವಿರಾಮ (,)<br>3. ಅರ್ಧವಿರಾಮ (;)<br>4. ವಿವರಣಾ ಚಿಹ್ನೆ (:)<br>5. ಪ್ರಶ್ನೆಸೂಚಕ (?)<br>6. ಭಾವಸೂಚಕ (!)<br>7. ಒಂಟಿ ಉದ್ಧರಣ (‘ ’)<br>8. ಜೋಡಿ ಉದ್ಧರಣ (“ ”) | ಅಭ್ಯಾಸ ಹಾಳೆ |
| | | * ಅಭ್ಯಾಸ ಚಟುವಟಿಕೆಗಳನ್ನು ಮಾಡುವರು. | * ಅಭ್ಯಾಸ ಪ್ರಶ್ನೆಗಳಿಗೆ ಉತ್ತರಿಸುವರು. | ಅಭ್ಯಾಸ ಹಾಳೆ |

## ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 7** **ಪ್ರಥಮ ಭಾಷೆ : ಕನ್ನಡ** **ಮಾಹೆ : ಫೆಬ್ರವರಿ – 2022**

**ಪದ್ಯ ಭಾಗ : ತಿರುಕನ ಕನಸು (ಪದ್ಯ)**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ಫೆಬ್ರವರಿ 3 ನೇ ವಾರ ಮತ್ತು 4 ನೇ ವಾರ** | * ಕೃತಿಕಾರರ ಪರಿಚಯ | * ಮುಪ್ಪಿನ ಷಡಕ್ಷರಿಯವರ ಜೀವಿತ ಕಾಲ, ಸ್ಥಳ, ಕೃತಿ ಇತ್ಯಾದಿಗಳ ಬಗ್ಗೆ ಶಿಕ್ಷಕರು ಮಕ್ಕಳಿಗೆ ಪರಿಚಯಿಸುವರು. | ಮುಪ್ಪಿನ ಷಡಕ್ಷರಿಯವರ ಕಾಲ, ಸ್ಥಳ, ಕೃತಿಯ ಬಗ್ಗೆ ತಿಳಿಸಿ. |
| | | * ತಿರುಕನ ಕನಸು ಪದ್ಯ<br>ಶಿಕ್ಷಕರ ಓದು<br>ಮಕ್ಕಳ ಓದು<br>ಮೌನ ಓದು | * ತಿರುಕನೊರ್ವನೂರ ಮುಂದೆ<br>ಮುರುಕುಧರ್ಮಶಾಲೆಯಲ್ಲಿ<br>ಒರುಗಿರುತ್ತಲೊಂದು ಕನಸ ಕಂಡನೆಂತೆನೆ<br>ಪುರದ ರಾಜ ಸತ್ತನವಗೆ<br>ವರಕುಮಾರರಿಲ್ಲದಿರಲು<br>ಕರಿಯ ಕೈಗೆ ಕುಸುಮಮಾಲೆಯಿತ್ತು ಪುರದೊಳು ॥ 1 ॥ | ಪದ್ಯಭಾಗವನ್ನು ತಪ್ಪಿಲ್ಲದೆ ಓದುವುದನ್ನು ಅವಲೋಕನ ಮಾಡುವರು. |
| | | * ಪದ್ಯದಲ್ಲಿ ಬರುವ ಪದಗಳ ಅರ್ಥ ತಿಳಿಯುವರು. | * ತಿರುಕ – ಭಿಕ್ಷುಕ, ಕರಿ – ಆನೆ, ತೊಡರಿಸು – ಧರಿಸು<br>ಮಾಳಪೆವು – ಮಾಡುವೆವು, ಪೊಡವಿ – ರಾಜ್ಯ,<br>ಆಣ್ಮ – ಒಡೆಯ, ನೃಪ – ರಾಜ, ಓಲಗ – ರಾಜಸಭೆ,<br>ಅನಿತರೊಳಗೆ – ಅಷ್ಟರಲ್ಲಿ, ದಂಡು – ಸೈನ್ಯ | ತಿರುಕ, ಕರಿ, ತೊಡರಿಸು,<br>ಮಾಳ್ಪೆ, ಪೊಡವಿ,<br>ಆಣ್ಮ, ನೃಪ, ಓಲಗ,<br>ಅನಿತರೊಳಗೆ, ದಂಡು – ಈ ಪದಗಳಿಗೆ ಕನ್ನಡ ನಿಘಂಟುವಿನಲ್ಲಿರುವ ಅರ್ಥಗಳನ್ನು ಹುಡುಕಿ ಬರೆ. |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಪದ್ಯಭಾಗದ ಮರು ಓದು | * ಶಿಕ್ಷಕರು ಮತ್ತು ಮಕ್ಕಳು ಪದ್ಯಭಾಗದ ಮರು ಓದನ್ನು ಪುಟ 122 ರಲ್ಲಿ ನೋಡಿ ಓದುವರು. | ಮಕ್ಕಳು ಓದುವಾಗ ಶಿಕ್ಷಕರು ತಪ್ಪುಗಳನ್ನು ತಿದ್ದುವರು. |
| | | * ಪದ್ಯಭಾಗದ ಸಾರಾಂಶವನ್ನು ಕ್ರೋಢೀಕರಿಸಲು ಪದ್ಯದ 6 ಪ್ಯಾರಾಗಳನ್ನು ಅರ್ಥೈಸಿಕೊಳ್ಳಲು ಮಕ್ಕಳಿಗೆ ಅವಕಾಶ ನೀಡುವರು. | * ಪದ್ಯದ 6 ಪ್ಯಾರಾಗಳನ್ನು, ತರಗತಿಯ ಮಕ್ಕಳಿಗೆ ಗುಂಪು ಮಾಡಿ ಹಂಚುವುದು, ನಂತರ ಗುಂಪಿನಲ್ಲಿ ತಮಗೆ ಬಂದ ಪದ್ಯದ ಪ್ಯಾರಾದ ಸಾರಾಂಶವನ್ನು ಚರ್ಚಿಸುವರು ಮತ್ತು ತರಗತಿಗೆ ತಿಳಿಸುವರು. ಹೀಗೆ ಪ್ರತೀ ಗುಂಪಿನಿಂದ ಬರುವ ಪದ್ಯಭಾಗದ ಸಾರಾಂಶವನ್ನು ಶಿಕ್ಷಕರು ಮಾರ್ಗದರ್ಶಿಸುತ್ತಾ ಕ್ರೋಢೀಕರಿಸುವರು. | ಗುಂಪು ಚರ್ಚೆ<br>ಅವಲೋಕನ<br>ಅವಲೋಕನ ಪಟಿ |
| | | * ವಿಷಯವನ್ನು ಆಲಿಸಿದ ಬಳಿಕ ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಕಾರಣ ಸಹಿತ ವಿಶ್ಲೇಷಿಸುವರು. | * ಶಿಕ್ಷಕರು ಮಕ್ಕಳಿಗೆ ಪ್ರಶ್ನೋತ್ತರಗಳ ಮೂಲಕ ಸಾಮರ್ಥ್ಯ ಗಳಿಕೆಗೆ ಅನುಕೂಲಿಸುವರು.<br>1. ಕರಿಯ ಕೈಗೆ ಕುಸುಮ ಮಾಲೆಯನ್ನು ಕೊಡಲು ಕಾರಣವೇನು?<br>2. ತಿರುಕ ಪೊಡವಿಯಾಣ್ಮನಾದುದು ಹೇಗೆ?<br>3. ಕನಸು ಕಾಣುತ್ತಿದ್ದ ತಿರುಕನು ಹೆದರಿ ಏಕೆ ಕಣ್ಣು ತೆರೆದನು? | ಶಿಕ್ಷಕರು ಪದ್ಯಭಾಗವನ್ನು ಕುರಿತು ಏಕೆ? ಹೇಗೆ? ಎಂಬ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳುವರು.<br>ಪ್ರಶ್ನೋತ್ತರ<br>ಅಭ್ಯಾಸ ಹಾಳೆ |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | ಕೊಟ್ಟ ಪದಗಳನ್ನು ಬಿಡಿಸಿ ಬರೆಯುವರು. | * ಮಾದರಿ : ತಿರುಕನೊರ್ವನೂರಮುಂದೆ<br>ತಿರುಕನು + ಒರ್ವನು + ಊರ + ಮುಂದೆ<br>1. ಒರಗಿರುತ್ತಲೊಂದು<br>2. ವರಕುಮಾರರಿಲ್ಲದಿರಲು<br>3. ಪೊಡವಿಯಾಣ್ಮನಾದನೆಂದು<br>4. ನಿಷ್ಟಸುಖದೊಳಿರಲವಂಗೆ (ಪುಟ 124) | ಅಭ್ಯಾಸ ಹಾಳೆ |
| | | * ಅಭ್ಯಾಸ ಚಟುವಟಿಕೆಗಳು. | * ಪುಟ ಸಂಖ್ಯೆ 123 ಮತ್ತು 124 ರಲ್ಲಿರುವ ಎಲ್ಲಾ ಅಭ್ಯಾಸ ಚಟುವಟಿಕೆಗಳನ್ನು ನಿರ್ವಹಿಸುವರು. | ಅಭ್ಯಾಸ ಹಾಳೆ |
| | | * ಏಕೆ? ಹೇಗೆ? ಪ್ರಶ್ನೆಗಳ ರಚನೆ ಮತ್ತು ಕಾರಣ ಸಹಿತ ವಿಶ್ಲೇಷಣೆ. | * ತರಗತಿಯ ಮಕ್ಕಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಿ ರಾಮಾಯಣ, ಮಹಾಭಾರತದ ಆಯ್ದ ಕಥೆಗಳನ್ನು ನೀಡಿ ಓದಿಸುವುದು. ಮೊದಲ ಗುಂಪು ಆಯ್ದ ಭಾಗದಲ್ಲಿ ಏಕೆ? ಹೇಗೆ? ಎಂಬ ಪ್ರಶ್ನೆಗಳನ್ನು ರಚಿಸಲಿ. ಎರಡನೇ ಗುಂಪು ಪ್ರಶ್ನೆಗಳಿಗೆ ಕಾರಣ ಸಹಿತ ವಿಶ್ಲೇಷಣೆ ನೀಡಲಿ. ಶಿಕ್ಷಕರು ಮಾರ್ಗದರ್ಶನ ನೀಡಲಿ. | ಗುಂಪು ಚಟುವಟಿಕೆ |

ಅಭ್ಯಾಸ ಹಾಳೆ – 1

ತರಗತಿ : 7 ಪಾಠ : ಸಂಕ್ರಾಂತಿಯಂದು ಸುಖ – ದುಃಖ ಮಾಹೆ : ಫೆಬ್ರವರಿ – 2022

☞ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ಸಂಕ್ರಾಂತಿ ಯಾವ ರೀತಿಯ ಹಬ್ಬ?
2. ಕಿಚ್ಚು ಹಾಯಿಸುವುದು ಎಂದರೇನು?
3. ಯಾವಾಗ ಸ್ವರ್ಗದ ಬಾಗಿಲು ತೆಗೆಯುತ್ತದೆ?
4. ಸಂಕ್ರಾಂತಿಯ ಮರುದಿನದಿಂದ ಯಾವ ಬದಲಾವಣೆ ಉಂಟಾಗುತ್ತದೆ?
5. ಹಳ್ಳಿಗಳಲ್ಲಿ ಪಟೇಲರು ಏನು ಕೊಡಿಸಿ ರಾಜಿ ಮಾಡುತ್ತಿದ್ದರು?
6. ಕೃಷಿಕರ ಮನೆಯಲ್ಲಿ ದನಕರುಗಳ ಜಾಗಕ್ಕೆ ಏನು ಬಂದು ನಿಂತಿದೆ?
7. ನಮ್ಮ ಸಂಕ್ರಾಂತಿಯಲ್ಲಿ ಏನೆಲ್ಲಾ ಇರಬೇಕೆಂದು ಲೇಖಕರು ಬಯಸುತ್ತಾರೆ?
8. ಎಳ್ಳು-ಬೆಲ್ಲ ನೀಡುವುದು ಯಾವುದರ ಸಂಕೇತವಾಗಿದೆ?

## ಅಭ್ಯಾಸ ಹಾಳೆ – 2

ತರಗತಿ : 7 ಪಾಠ : ಸಂಕ್ರಾಂತಿಯಂದು ಸುಖ – ದುಃಖ ಮಾಹೆ : ಫೆಬ್ರವರಿ – 2022

☞ ಈ ಕೆಳಗಿನ ಪ್ರಶ್ನೆಗಳಿಗೆ 2–3 ಉತ್ತರಿಸಿ:

1. ಸಂಕ್ರಾಂತಿಯಲ್ಲಿ ದನಗಳಿಗೆ ಏನು ಮಾಡಲಾಗುತ್ತದೆ?

2. ಎಳ್ಳು–ಬೆಲ್ಲ ನೀಡುವುದು ಇಂದಿನ ಕಾಲದಲ್ಲಿ ಹೇಗಿದೆ?

☞ ಹೊಂದಿಸಿ ಬರೆಯಿರಿ:

| | |
|---|---|
| 1. ಯುಗಾದಿ | ಎಳ್ಳು–ಬೆಲ್ಲ |
| 2. ದೀಪಾವಳಿ | ದಸರಾ |
| 3. ರಂಜಾನ್ | ಯೇಸು ಹುಟ್ಟಿದ ದಿನ |
| 4. ಕ್ರಿಸ್‌ಮಸ್ | ಬೇವು–ಬೆಲ್ಲ |
| 5. ವಿಜಯದಶಮಿ | ಬೆಳಕಿನ ಹಬ್ಬ |
| 6. ಮಕರ ಸಂಕ್ರಾಂತಿ | ಉಪವಾಸದ ಪರ್ವದಿನ |

## ಅಭ್ಯಾಸ ಹಾಳೆ – 3

ತರಗತಿ : 7 ಪಾಠ : ಸಂಕ್ರಾಂತಿಯಂದು ಸುಖ – ದುಃಖ ಮಾಹೆ : ಫೆಬ್ರವರಿ – 2022

---

☞ ಈ ವಾಕ್ಯಗಳಲ್ಲಿ ಬಳಸಬೇಕಾದ ಲೇಖನ ಚಿಹ್ನೆಗಳನ್ನು ಗುರ್ತಿಸಿ ಬರೆಯಿರಿ:

1. ವಿದ್ಯಾರ್ಥಿಗಳು ಭಾಷೆಯನ್ನು ಚೆನ್ನಾಗಿ ಕಲಿಯಬೇಕಲ್ಲವೇ ____________
   1. ಪ್ರಶ್ನಾರ್ಥಕ ಚಿಹ್ನೆ  2. ವಾಕ್ಯವೇಷ್ಟನ ಚಿಹ್ನೆ
   3.ಭಾವಸೂಚಕ ಚಿಹ್ನೆ  4. ಅಲ್ಪವಿರಾಮ ಚಿಹ್ನೆ
2. ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ______________
   1. ಪ್ರಶ್ನಾರ್ಥಕ ಚಿಹ್ನೆ  2. ಅರ್ಧವಿರಾಮ ಚಿಹ್ನೆ
   3.ಪೂರ್ಣವಿರಾಮ ಚಿಹ್ನೆ  4. ಅಲ್ಪವಿರಾಮ ಚಿಹ್ನೆ
3. ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ _________
   1. ಪ್ರಶ್ನಾರ್ಥಕ ಚಿಹ್ನೆ  2. ಉದ್ಧರಣ ಚಿಹ್ನೆ
   3.ಭಾವಸೂಚಕ ಚಿಹ್ನೆ  4. ಅಲ್ಪವಿರಾಮ ಚಿಹ್ನೆ
4. ರಾಜನು ಸೇನಾಧಿಪತಿ ಸೈನಿಕರು ಹಾಗೂ ಶಸ್ತ್ರಗಳೊಂದಿಗೆ ಯುದ್ಧಕ್ಕೆ ಹೊರಟನು________
   1. ಪ್ರಶ್ನಾರ್ಥಕ ಚಿಹ್ನೆ  2. ಅರ್ಧವಿರಾಮ ಚಿಹ್ನೆ
   3.ಭಾವಸೂಚಕ ಚಿಹ್ನೆ  4. ಅಲ್ಪವಿರಾಮ ಚಿಹ್ನೆ

☞ ಸುಮೇರು ಭಾಗ–2 ರಲ್ಲಿರುವ ಪುಟ ಸಂಖ್ಯೆ 17 ರ ಚಟುವಟಿಕೆಯನ್ನು ಮಾಡಿಸುವುದು.

ಅಭ್ಯಾಸ ಹಾಳೆ – 4

ತರಗತಿ : 7 ಪದ್ಯ : ತಿರುಕನ ಕನಸು ಮಾಹೆ : ಫೆಬ್ರವರಿ – 2022

☞ 'ಅ' ಪಟ್ಟಿಯಲ್ಲಿರುವ ಪದಗಳಿಗೆ 'ಬ' ಪಟ್ಟಿಯಲ್ಲಿರುವ ಅವುಗಳ ಅರ್ಥಗಳಿಗೆ ಅನುಸಾರವಾಗಿ ಹೊಂದಿಸಿ ಬರೆಯಿರಿ.

| ಅ | ಬ |
|---|---|
| 1. ಧರ್ಮಶಾಲೆ | ಉತ್ಸುಕ |
| 2. ಓಲಗ | ರಾಜ |
| 3. ನೃಪ | ರಾಜ್ಯ |
| 4. ಭಟ್ಟಿನಿಯರು | ಅನ್ನಛತ್ರ |
| 5. ಪೊಡವಿ | ರಾಜಸಭೆ |
| 6. ಲೋಲ | ಹೆಂಡತಿಯರು |

☞ 'ಚಾತುರಂಗ' ದ ಬಗ್ಗೆ ತಿಳಿಸಿ.

☞ ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಆನೆಯು ಯಾರ ಕೊರಳಿಗೆ ಮಾಲೆಯನ್ನು ಹಾಕಿತು?
2. ತಿರುಕ ಪೊಡವಿಯಾಣ್ಮನಾದುದು ಹೇಗೆ?

☞ ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ:

1. ಕನಸು ಕಾಣುತ್ತಿದ್ದ ತಿರುಕನು ಹೆದರಿ ಏಕೆ ಕಣ್ಣು ತೆರೆದನು?

☞ ಕೊಟ್ಟಿರುವ ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ:

1. ತಿರುಕನ ಕನಸಿನಲ್ಲಿ ರಾಜ್ಯವನ್ನುಆಳಿದ ರೀತಿಯನ್ನು ವಿವರಿಸಿ.

## ಅಭ್ಯಾಸ ಹಾಳೆ – 5

ತರಗತಿ : 7 | ಪದ್ಯ : ತಿರುಕನ ಕನಸು | ಮಾಹೆ : ಫೆಬ್ರವರಿ – 2022

☞ ಈ ಪದ್ಯಭಾಗವನ್ನು ಪೂರ್ಣಗೊಳಿಸಿ:

ಧನದ ಮದವು ______________________

______________________________

______________________________

______________________________

______________________________

________________ ಹಿಗ್ಗುತಿರ್ದನು.

☞ ಮಾದರಿಯಂತೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯಿರಿ:

ಮಾದರಿ : ತಿರುಕನೊರ್ವನೂರಮುಂದೆ

ತಿರುಕನು + ಒರ್ವನು + ಊರ + ಮುಂದೆ

1. ಒರಗಿರುತ್ತಲೊಂದು
2. ವರಕುಮಾರರಿಲ್ಲದಿರಲು
3. ಪೊಡವಿಯಾಣ್ಮನಾದನೆಂದು
4. ನಿಪ್ಪಸುಖದೊಳಿರಲವಂಗೆ

☞ ಚಟುವಟಿಕೆ:

ರಾಮಾಯಣ ಅಥವಾ ಮಹಾಭಾರತದ ಕಥಾ ಭಾಗವೊಂದನ್ನು ಆರಿಸಿಕೊಂಡು ತರಗತಿಯ ಒಂದು ಗುಂಪು ಏಕೆ? ಹೇಗೆ? ಎಂಬ ಪ್ರಶ್ನೆಗಳನ್ನು ರಚಿಸುವುದು. ಎರಡನೆಯ ಗುಂಪು ಆ ಪ್ರಶ್ನೆಗಳಿಗೆ ಕಾರಣ ಸಹಿತ ವಿಶ್ಲೇಷಣೆ ಮಾಡುವುದು.

**ಸೂಚನೆ :**

**ಮೇಲಿನ ಪರ್ಯಾಯ ಯೋಜನೆಯು ಮಾದರಿಯಾಗಿದ್ದು, ಶಿಕ್ಷಕರು ಇದಕ್ಕಿಂತಲೂ ಉತ್ತಮ ಚಟುವಟಿಕೆಗಳನ್ನು ಆಯೋಜಿಸಲು ಸ್ವತಂತ್ರರು. ಇ–ಸಂವೇದ, ದೀಕ್ಷಾ ತಂತ್ರಾಂಶಗಳನ್ನು ಬಳಸಿಕೊಳ್ಳುವುದು.**